ದಿನಾಂಕ 16.07.2019 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಪಾಟೀಸವಾಲು ಃ ಶ್ರೀ ಬಿ.ಜೆ.ಆರ್. ವಕೀಲರಿಂದಃ**

ನಾವು ಇಬ್ಬರು ಸಹೋದರರು. ನಮ್ಮ ಜಮೀನಿನ ಸರ್ವೆ ನಂ ೮೩/೫. ದಾವಾ ಜಮೀನುಗಳು ನಮ್ಮ ಜಮೀನಿನಿಂದ ಸುಮಾರು ೨ ಕಿ.ಮೀ ದೂರದಲ್ಲಿ ದಾವಾ ಜಮೀನುಗಳು ಇವೆ ಎಂದರೆ ಅರ್ಧ ಫರ್ಲಾಂಗ್ ದೂರದಲ್ಲಿ ಇದೆ. ನಮ್ಮ ಕುಟುಂಬದ ವ್ಯವಹಾರಗಳು ಹಾಗೂ ೪ನೇ ಪ್ರತಿವಾದಿಯ ಕುಟುಂಬದ ವ್ಯವಹಾರಗಳು ಪ್ರತ್ಯೇಕವಾಗಿವೆ. ಚಿಕ್ಕದಾಸಪ್ಪನ ಕುಟುಂಬದ ವ್ಯವಹಾರಗಳು ನನಗೆ ಪೂರ್ಣವಾಗಿ ಗೊತ್ತಿಲ್ಲ ಎಂದರೆ ಜಮೀನು ಮಾರಾಟ ಮಾತ್ರ ಗೊತ್ತು ಎನ್ನುತ್ತಾರೆ. ಸದರಿ ಜಮೀನುಗಳ ವ್ಯವಹಾರಗಳಲ್ಲಿ ನಾನು ಖುದ್ದಾಗಿ ಭಾಗಿ ಆಗಿಲ್ಲ.

೨. ಈರ ಮರಿಯಣ್ಣ ಮೃತಪಟ್ಟು ಸುಮಾರು ೨೦ ವರ್ಷಗಳಾಗಿವೆ. ಕದುರಣ್ಣ ಇವರು ಈರ ಮರಿಯಣ್ಣನ ಮೊದಲೇ ಮೃತಪಟ್ಟಿರುತ್ತಾರೆ. ಚಿಕ್ಕ ದಾಸಪ್ಪನ ಮಕ್ಕಳು ಕುಟುಂಬದ ಸ್ವತ್ತುಗಳನ್ನು ಮೌಖಿಕವಾಗಿ ಅಥವಾ ಪಂಚಾಯಿತಿ ವಿಭಾಗ ಪತ್ರ ಅಥವಾ ನೊಂದಾಯಿತ ವಿಭಾಗ ಪತ್ರದ ಮೂಲಕ ಹಿಸ್ಸೆ ಮಾಡಿಕೊಂಡ ಬಗ್ಗೆ ನನಗೆ ಗೊತ್ತಿಲ್ಲ. ಚಿಕ್ಕದಾಸಪ್ಪನ ಮಕ್ಕಳು ಹೆಣ್ಣು ಮಕ್ಕಳ ಹೊಂದಾಣಿಕೆ ಇಲ್ಲದ ಕಾರಣ ಬೇರೆ ಬೇರೆ ವಾಸ ಮಾಡುತ್ತಿದ್ದರು ಎಂದರೆ ಸರಿ. ಚಿಕ್ಕದಾಸಪ್ಪನ ಮಕ್ಕಳು ಎಲ್ಲಾ ಸ್ವತ್ತುಗಳನ್ನು ಜಂಟಿ ಸ್ವಾಧೀನದಲ್ಲಿ ಹೊಂದಿದ್ದರು ಎಂದರೆ ಸರಿಯಲ್ಲ. ಚಿಕ್ಕದಾಸಪ್ಪನ ಮಕ್ಕಳು ಕುಟುಂಬದ ಆಸ್ತಿಗಳಲ್ಲಿ ಎಷ್ಟು ವಿಸ್ತೀರ್ಣದಲ್ಲಿ ಪ್ರತ್ಯೇಕವಾಗಿ ಸ್ವಾಧೀನ ಹೊಂದಿದ್ದಾರೆ ನನಗೆ ಗೊತ್ತಿಲ್ಲ.

೩. ಈರ ಮರಿಯಪ್ಪನಿಗೆ ಜಮೀನು ಮಂಜೂರಾದ ವಿಷಯವನ್ನು ಈರ ಮರಿಯಪ್ಪನೇ ನನಗೆ ಸುಮಾರು ೨೫ ವರ್ಷಗಳ ಹಿಂದೆ ತಿಳಿಸಿದ್ದನು. ಆ ಕಾಲದಲ್ಲಿ ಸಹ ಈರ ಮರಿಯಪ್ಪನ ಸಹೋದರರು ಜಮೀನುಗಳನ್ನು ಜಂಟಿಯಾಗಿ ಅನುಭವಿಸುತ್ತಿದ್ದರು ಎಂದರೆ ಸರಿಯಲ್ಲ. ಈರ ಮರಿಯಪ್ಪನ ಸಹೋದರರು ಪ್ರತ್ಯೇಕವಾಗಿ ಅನುಭವಿಸುತ್ತಿದ್ದ ಬಗ್ಗೆ ನಾನು ದಾಖಲೆ ನೋಡಿಲ್ಲ. ನಿಂಗಮ್ಮಳನ್ನು ಲಿಂಗಮ್ಮ ಎಂದು ಸಹ ಕರೆಯುತ್ತಿದ್ದ ಬಗ್ಗೆ ದಾಖಲೆ ನೋಡಿಲ್ಲ.

೪. ದಾವಾ ಐಟಂ ನಂ ೧ ಮತ್ತು ೨ ನ್ನು ಒಟ್ಟು ಕುಟುಂಬದ ಪರವಾಗಿ ಈರ ಮರಿಯಪ್ಪನ ಹೆಸರಿಗೆ ಮಂಜೂರು ಮಾಡಲಾಗಿತ್ತು ಎಂದರೆ ಸರಿಯಲ್ಲ. ಮಂಜೂರಾತಿ ದಾಖಲೆಗಳನ್ನು ನಾನು ನೋಡಿಲ್ಲ. ೪ನೇ ಪ್ರತಿವಾದಿ ಚಿತಾವಣೆಯ ಮೇರೆಗೆ ವಾದಿಗಳ ಹಿಸ್ಸೆಯನ್ನುದಾವಾ ಐಟಂ ನಂ ೧ ಮತ್ತು ೨ ರಲ್ಲಿ ತಪ್ಪಿಸುವ ಉದ್ದೇಶದಿಂದ ಸುಳ್ಳು ಸಂಗತಿಗಳ ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಕ್ರಯ ಪತ್ರಗಳನ್ನು ೪ನೇ ಪ್ರತಿವಾದಿ ಸೃಷ್ಟಿ ಮಾಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಐಟಂ ನಂ ೧ ಮತ್ತು ೨ ಈರ ಮರಿಯಪ್ಪನಿಗೆ ಒಟ್ಟು ಕುಟುಂಬದ ಪರವಾಗಿ ಮಂಜೂರಾಗಿದ್ದರು ಸಹ ಅವುಗಳಲ್ಲಿ ವಾದಿಗಳ ಹಿಸ್ಸೆ ತಪ್ಪಿಸುವ ಉದ್ದೇಶದಿಂದ ಸುಳ್ಳು ಸಂಗತಿಗಳ ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಪಕ್ಕ ನನ್ನ ಆಸ್ತಿ ಇದೆ ಎಂದರೆ ಸರಿಯಲ್ಲ. ದಾವಾ ಐಟಂ ನಂ ೧ ಮತ್ತು ೨ ನ್ನು ೧೯೭೫ ಮತ್ತು ೧೯೮೨ ರಲ್ಲಿ ಈರ ಮರಿಯಪ್ಪ ಮತ್ತು ಆತನ ಸಹೋದರರು ವಿಭಾಗ ಮಾಡಿಕೊಂಡು ಜಂಟಿ ಸ್ವಾಧೀನ ಹೊಂದಿದ್ದಾರೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್‌ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ,

ಹಿರಿಯ ಸಿ.ಜೆ. ಮತ್ತು ಜೆಎಂಎಫ್.ಸಿ ಸಿರಾ.